## ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಉಡುಪಿ ಜಿಲ್ಲೆ, ಉಡುಪಿ.

<u>ಸೆಷನ್ಸ್ ಕೇಸ್ ನಂಃ **28/2024**</u> <u>ಪಿಡಬ್ಲ್ಯು-**1**</u>

<u>ಸಿಡಬ್ಲ್ಯು-**1**</u>

| | | |
|---|---|---|
| ಸಾಕ್ಷಿದಾರರ ಹೆಸರು | - | ದೇವಮ್ಮ ವಿಠಲಾಪುರ |
| ಗಂಡನ ಹೆಸರು | - | ಸಂಜೀವಪ್ಪ ವಿಠಲಾಪುರ |
| ವಯಸ್ಸು | - | 60 ವರ್ಷ |
| ಉದ್ಯೋಗ | - | ಕೂಲಿ |
| ವಿಳಾಸ | - | ಇಳಕಲ್, ಬಾಗಲಕೋಟೆ. |

ದಿನಾಂಕಃ 18-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ</u>

1. ನಾನು ಬಾಲಕೋಟೆ ಜಿಲ್ಲೆಯ ಇಳಕಲ್ ತಾಲೂಕಿನ ಮರಟಗೇರಿ ಗ್ರಾಮದಲ್ಲಿ ವಾಸ ಇದ್ದೇನೆ. ನನಗೆ ಎರಡು ಹೆಣ್ಣು ಮಕ್ಕಳು ಹಾಗೂ ಒಂದು ಗಂಡು ಮಗ ಇದ್ದಾನೆ. ಮೃತ ಜ್ಯೋತಿ ನನ್ನ ಮಗಳು. ಈ ದಿವಸ ನ್ಯಾಯಾಲಯದ ಮುಂದೆ ಇರುವ ಆರೋಪಿ ಮೃತ ಜ್ಯೋತಿಯ ಗಂಡ. ಸುಮಾರು ಆರು ವರ್ಷದ ಹಿಂದೆ ಮೃತ ಜ್ಯೋತಿ ಮತ್ತು ಆರೋಪಿಯ ಮದುವೆ ದೇವಸ್ಥಾನದಲ್ಲಿ ನಡೆದಿತ್ತು. ನಾನು ಆ ಮದುವೆಗೆ ಹೋಗಿರುವುದಿಲ್ಲ. ಆಕೆ ಆರೋಪಿಯೊಂದಿಗೆ ಪ್ರೀತಿಸಿ ಮದುವೆಯಾದ ಕಾರಣ ಮದುವೆಗೆ ಹೋಗಿರುವುದಿಲ್ಲ. ಮದುವೆಯ ನಂತರ ನನ್ನ ಮಗಳು ಆರೋಪಿಯೊಂದಿಗೆ ಬೇರೆ ಮನೆಯಲ್ಲಿ ವಾಸ ಮಾಡಿಕೊಂಡಿದ್ದಳು. ಮದುವೆಯಾದ ಒಂದು ವರ್ಷದವರೆಗೆ ಆಕೆ ನಮ್ಮೊಂದಿಗೆ ಮಾತನಾಡುತ್ತಿರಲಿಲ್ಲ, ನಂತರದಲ್ಲಿ ನಿಧಾನವಾಗಿ ಮಾತನಾಡಲು ಪ್ರಾರಂಭಿಸಿರುತ್ತಾಳೆ. ಆರೋಪಿ ಆತನ ಊರಿನಲ್ಲೇ ಅರೆಕಾಲಿಕ ಉಪನ್ಯಾಸಕನಾಗಿ ಕೆಲಸ ಮಾಡುತ್ತಿದ್ದ. ಸುಮಾರು ನಾಲ್ಕು ವರ್ಷದ ಹಿಂದೆ ನನ್ನ ಮಗಳು ಜ್ಯೋತಿ ಇವಳಿಗೆ ಉಡುಪಿಯಲ್ಲಿ ಪೋಲಿಸ್ ಇಲಾಖೆಯಲ್ಲಿ ಕೆಲಸ ಸಿಕ್ಕಿರುತ್ತದೆ. ಆಕೆ ಕಾಪು ಪೋಲಿಸ್ ಠಾಣೆಯಲ್ಲಿ ನೌಕರಿ ಮಾಡುತ್ತಿದ್ದಳು. ಪೋಲಿಸ್ ಇಲಾಖೆಯ ವಸತಿಗೃಹದಲ್ಲಿ ಆಕೆ ವಾಸ ಮಾಡುತ್ತಿದ್ದಳು. ನಂತರ ಆರೋಪಿ ಸಹಾ ಉಡುಪಿಯಲ್ಲಿ ಕೆಲಸಕ್ಕೆ ಬಂದು ಅದೇ ವಸತಿಗೃಹದಲ್ಲಿ ವಾಸ ಮಾಡುತ್ತಿದ್ದರು.

2. ಆರೋಪಿ ಮತ್ತು ಮೃತ ಜ್ಯೋತಿ ಉಡುಪಿಯಲ್ಲಿ ವಾಸ ಮಾಡಿಕೊಂಡಿದ್ದಾಗ ಆರೋಪಿ ನನ್ನ ಮಗಳಿಗೆ ನಿನಗೆ ಬೇರೆ ಹುಡುಗನೊಂದಿಗೆ ಸಂಬಂಧ ಇದೆ, ಕೆಲಸಕ್ಕೆ ಬೇಗ ಹೋಗುವುದು, ತಡವಾಗಿ ಮನೆಗೆ ಬರುವುದು ಮತ್ತು ಬೇರೆಯವರ ಜೊತೆಗೆ ಸಂಬಂಧ ಇರುವ ಕಾರಣದಿಂದ ನೀನು ಬೇಗ ಹೋಗಿ ತಡವಾಗಿ ಬರುತ್ತೀಯಾ ಎಂದು ಅನುಮಾನವಾಗಿ ನನ್ನೊಂದಿಗೆ ವರ್ತಿಸುತ್ತಿದ್ದ ಎಂದು ನನ್ನ ಮಗಳು ನನ್ನ ಬಳಿ ಹೇಳುತ್ತಿದ್ದಳು. ನಾವು ಆರೋಪಿಗೆ ಈ ಬಗ್ಗೆ ಬುದ್ಧಿ ಹೇಳಿದರೂ ಕೂಡ ಆತ ನಮ್ಮ ಮಾತು ಕೇಳುತ್ತಿರಲಿಲ್ಲ. ಅಲ್ಲದೆ ಆರೋಪಿ ಈ ವಿಚಾರವನ್ನು ಆತನ ಸ್ನೇಹಿತರ ಜೊತೆಗೂ ಕೂಡ ಹೇಳಿ ಆಕೆಯನ್ನು ಅವಮಾನಿಸುತ್ತಿದ್ದ ಎಂದು ಹೇಳುತ್ತಿದ್ದಳು.

3. ಸುಮಾರು ಒಂದು ವರ್ಷ ಮೂರು ತಿಂಗಳ ಹಿಂದೆ ಆರೋಪಿಯ ಸಂಬಂಧಿಕ ಮುಂಜಾನೆ 7-00 ಗಂಟೆಗೆ ನಮ್ಮ ಮನೆಗೆ ಬಂದು ನನ್ನ ಮಗಳು ಜ್ಯೋತಿ ಕಾಪುವಿನಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ ಎಂದು ತಿಳಿಸಿರುತ್ತಾರೆ. ತಕ್ಷಣ ನಾನು ಮತ್ತು ನನ್ನ ಮಗ ಒಂದು ವಾಹನ ಮಾಡಿಕೊಂಡು ಕಾಪುವಿಗೆ ಬಂದಿರುತ್ತೇವೆ. ನನ್ನ ಮಗಳು ಚಾಸಾ.3 ಆಕೆಯೂ ಸಹಾ ಆಕೆ ಗಂಡನ ಮನೆಯಿಂದ ಕಾಪುವಿಗೆ ಬಂದಿರುತ್ತಾಳೆ. ನಾವು ಒಳಗೆ ಹೋಗಿ ನೋಡಲಾಗಿ ಆಕೆ ನೇಣು ಹಾಕಿಕೊಂಡಿದ್ದಳು. ಅವಳು ಆತ್ಮಹತ್ಯೆ ಮಾಡಿಕೊಂಡ ಸ್ಥಳದಲ್ಲಿ ಒಂದು ಬುಕ್, ಒಂದು ಪೆನ್ ಮತ್ತು ಆಕೆಯ ಮೊಬೈಲ್ ಇತ್ತು. ಆ ಬುಕ್ಕನ್ನು ತೆಗೆದು ನೋಡಲಾಗಿ ಅದು ಆಕೆಯ ಕೈಬರಹದಲ್ಲಿತ್ತು. ಅವಳು ಶಾಲೆಗೆ ಹೋಗುವ ಸಂದರ್ಭದಲ್ಲಿ ಬರೆಯುತ್ತಿದ್ದಾಗ ನಾನು ಆಕೆಯ ಬರವಣಿಗೆಯನ್ನು ನೋಡಿರುತ್ತೇನೆ. ಆ ಕಾರಣ ಅದು ಅವಳ ಕೈಬರಹ ಎಂದು ನನಗೆ ಗೊತ್ತಾಯಿತು.

4. ಸದ್ರಿ ಪುಸ್ತಕದಲ್ಲಿ ಆರೋಪಿ ನನ್ನ ಬಗ್ಗೆ ಬೇರೆ ಗಂಡಸಿನೊಂದಿಗೆ ಮಾತನಾಡುತ್ತಿದ್ದ ಬಗ್ಗೆ ಅನುಮಾನ ವ್ಯಕ್ತ ಪಡಿಸಿದ ಕಾರಣ ನಾನು ನೊಂದು ಆತ್ಮಹತ್ಯೆ ಮಾಡಿಕೊಂಡಿರುತ್ತೇನೆ ಎಂದು ಬರೆಯಲಾಗಿದೆ. ಅಲ್ಲದೆ ನನ್ನ ಗಂಡ ಚಾಸಾ.10 ಮನೋಹರ್ ಎಂಬ ಪೋಲಿಸ್ ಜೊತೆ ನನಗೆ ಅನೈತಿಕ ಸಂಬಂಧ ಇದೆ ಎಂದು ನನ್ನ ಗಂಡ ನನ್ನ ಮೇಲೆ ಅನುಮಾನಿಸುತ್ತಿದ್ದ, ಆ ಕಾರಣ ದಿಂದಲೂ ಸಹಾ ನೊಂದಿದ್ದೇನೆ ಎಂದು ಬರೆದಿರುತ್ತಾಳೆ. ನಂತರ ಈ ಬಗ್ಗೆ ನಾನು ಕಾಪು ಪೋಲಿಸ್ ಠಾಣೆಯಲ್ಲಿ ಆರೋಪಿ ವಿರುದ್ಧ ದೂರು ಸಲ್ಲಿಸಿದ್ದೇನೆ. ಸದ್ರಿ ದೂರನ್ನು ನನ್ನ ಮಗ ಚಾಸಾ-2 ಬರೆದಿರುತ್ತಾನೆ. ಸದ್ರಿ ದೂರಿನಲ್ಲಿರುವ ಸಂಗತಿಗಳನ್ನು ನಾನು ನನ್ನ ಮಗನಿಗೆ ತಿಳಿಸಿರುತ್ತೇನೆ. ಸದ್ರಿ ದೂರಿಗೆ ನಾನು ನನ್ನ ಎಡಗೈ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ. ಸದ್ರಿ ದೂರನ್ನು ಈಗ ನೋಡುತ್ತಿದ್ದು, ನಿಪಿ-1 ಎಂದು ಗುರುತಿಸಲಾಯಿತು.

5. ಆಕೆ ಆತ್ಮಹತ್ಯೆ ಮಾಡಿಕೊಂಡ ಸ್ಥಳದಲ್ಲಿ ಬಿದ್ದಿದ್ದ ಮೊಬೈಲ್, ಪೆನ್ ಮತ್ತು ನೋಟ್ ಪುಸ್ತಕವನ್ನು ನೋಡಿದರೆ ಗುರುತಿಸುತ್ತೇನೆ. ಸೀಲು ಮಾಡಿದ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಪುಸ್ತಕವನ್ನು ನೋಡಿ ಗುರುತಿಸಿದ್ದು, ಪುಸ್ತಕವನ್ನು ನಿಪಿ-2 ಎಂದು, ಅದರಲ್ಲಿರುವ ಮೃತಳ ಡೆತ್ ನೋಟಿನ ಭಾಗವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಪೆನ್ನನ್ನು ನೋಡಿ ಗುರುತಿಸಿದ್ದು, ಅದನ್ನು ಮುದ್ದೆಮಾಲು-1 ಎಂದು ಗುರುತಿಸಲಾಯಿತು. ಪ್ಯಾಕ್ ಮಾಡಿ ಸೀಲು ಮಾಡಲಾದ ಮುದ್ದೆಮಾಲನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅದರಲ್ಲಿರುವ ಮೊಬೈಲನ್ನು ನೋಡಿ ಗುರುತಿಸಿದ್ದು, ಅದನ್ನು ಮುದ್ದೆಮಾಲು-2 ಎಂದು ಗುರುತಿಸಲಾಯಿತು. ನಾವು ಮನೆಗೆ ಬಂದಾಗ ಆರೋಪಿ ಸಹಾ ಸ್ಥಳದಲ್ಲಿದ್ದ. ಆತನನ್ನು ವಿಚಾರಿಸಿದಾಗ ಹಿಂದಿನ ರಾತ್ರಿ ನನಗೆ ಮತ್ತು ಜ್ಯೋತಿ ನಡುವೆ ಗಲಾಟೆಯಾಗಿತ್ತು ಎಂದು ತಿಳಿಸಿದನು.

<u>ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ.ಆರ್.ಎ. ರವರಿಂದ</u>

1. ಮದುವೆಯ ಪೂರ್ವದಲ್ಲಿ ಆರೋಪಿಯ ಪರಿಚಯ ಇರಲಿಲ್ಲ. ಆತನನ್ನು ಪ್ರೀತಿಸುತ್ತಿದ್ದೇನೆ ಎಂದು ನನ್ನ ಮಗಳು ನಮ್ಮ ಮನೆಯಲ್ಲಿ ಹೇಳಿರುವುದಿಲ್ಲ. ಆರೋಪಿ ನಮ್ಮ ಊರಿನವನು. ನನ್ನ ಮಗ ಚಾಸಾ-2 ಮತ್ತು ಆರೋಪಿ ಒಂದೇ ವಯಸ್ಸಿನವರು ಮತ್ತು ಅವರು ಸ್ನೇಹಿತರು. ಆರೋಪಿ ಮನೆಯವರು ನಮ್ಮ ಮನೆಗೆ ಬಂದು ಹೆಣ್ಣು ಕೊಡಿ ಎಂದು ಕೇಳಿಲ್ಲ. ನನ್ನ ಮಗಳು ಆರೋಪಿಯನ್ನು ಮದುವೆಯಾಗುತ್ತೇನೆ ಎಂದು ಹೇಳಿದ್ದಳು, ಆದರೆ ನಾವು ಆತನ ಜಾತಿ ಮತ್ತು ನಮ್ಮ ಜಾತಿ ಬೇರೆ ಬೇರೆ ಇರುವ ಕಾರಣ ಬೇಡ ಎಂದು ಹೇಳಿದ್ದೆ. ಮದುವೆ ಸಮಯದಲ್ಲಿ ನನ್ನ ಮಗಳು ಬಿ.ಎಡ್. ಓದುತ್ತಿದ್ದಳು. ಆಕೆ ಮದುವೆಯಾದ ನಂತರ ಆಕೆ ನಮ್ಮ ಜೊತೆ ಫೋನಿನಲ್ಲಿ ಮಾತನಾಡುತ್ತಿದ್ದಳು. ಮದುವೆಯ ನಂತರ ಆರೋಪಿ ಮತ್ತು ನನ್ನ ಮಗಳು ಇಳಕಲ್ ನಲ್ಲಿ ವಾಸ ಇದ್ದರು. ಮದುವೆಯಾದ ನಂತರ ನನ್ನ ಮಗಳು ಇಳಕಲ್ ನಲ್ಲಿ ಪಿ.ಜಿ.ಯಲ್ಲಿ ಇದ್ದುಕೊಂಡು ವಿದ್ಯಾಭ್ಯಾಸ ಮಾಡುತ್ತಿದ್ದಳು ಮತ್ತು ಆರೋಪಿ ಬೆಳಗಾಂ ನಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ಸರಿಯಲ್ಲ. ಇಳಕಲ್ ಮತ್ತು ಹುನಗುಂದ ನಡುವೆ ಸುಮಾರು 4 ಕಿ.ಮೀ. ಅಂತರ ಇದೆ. ಹುನಗುಂದದಲ್ಲಿ 2019 ರಿಂದ ಜುಲೈ 2022 ರವರೆಗೆ ಆರೋಪಿ ಮತ್ತು ನನ್ನ ಮಗಳು ಒಟ್ಟಿಗೆ ವಾಸವಿದ್ದರು.

2. ಬಿ.ಎಡ್. ಹೊರತುಪಡಿಸಿ ಬೇರೆ ಏನು ವಿದ್ಯಾಭ್ಯಾಸ ನನ್ನ ಮಗಳು ಮಾಡಿದ್ದಾಳೆ ಗೊತ್ತಿಲ್ಲ. ನನ್ನ ಮಗಳಿಗೆ ಪೋಲಿಸ್ ತರಬೇತಿ ಗದಗದಲ್ಲಿ ಆಗಿತ್ತು. ನಾವು ನಮ್ಮ ಮಗಳಿಗೆ ಪೋಲಿಸ್ ಕೆಲಸ ಸಿಗುವವರೆಗೆ ಮಾತನಾಡಿಸಿಲ್ಲ ಮತ್ತು ಕೆಲಸ ಸಿಕ್ಕಿದ ನಂತರದಲ್ಲಿ ಮಾತನಾಡಿಸಿದ್ದೇವೆ ಎಂದರೆ ಸರಿಯಲ್ಲ. ಆಕೆ ಎಲ್ಲೆಲ್ಲಿ ವಾಸ ಇದ್ದಳು ಮತ್ತು ಬೇರೆ ಏನು ಕಲಿತಿದ್ದಾಳೆ ಎಂದು

ನಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿ ಇಳಕಲ್ ನಲ್ಲಿ ಶಾಲೆಯಲ್ಲಿ ಕಲಿಸಲು ಹೋಗುತ್ತಿದ್ದ, ಅದನ್ನು ಬಿಟ್ಟು ಬೇರೆ ಎಲ್ಲಿ ಕೆಲಸ ಮಾಡಿದ್ದಾನೆ ಗೊತ್ತಿಲ್ಲ. ಊರಿಗೆ ಬಂದಾಗ ನನ್ನ ಮಗಳು ನಮ್ಮ ಮನೆಗೆ ಬರುತ್ತಿದ್ದಳು. ಮದುವೆಯಾದ ನಂತರ ಆಕೆ ನಮ್ಮ ಮನೆಗೆ ತುಂಬಾ ಸಲ ಬಂದಿದ್ದಾಳೆ. ನನ್ನ ಮಗಳ ಕಾಪುವಿನ ಮನೆಗೆ ನಾನು ಬಂದಿಲ್ಲ, ಆದರೆ ನನ್ನ ಮಗ ಮತ್ತು ಮಗಳು ಬಂದಿರುತ್ತಾರೆ. ನನ್ನ ಮಗನನ್ನು ಆರೋಪಿಯೇ ಕಾಪುವಿನ ಮನೆಗೆ ಕರೆದುಕೊಂಡು ಬಂದಿದ್ದ. ಅವರಿಬ್ಬರು ಸ್ನೇಹಿತರು ಇದ್ದ ಕಾರಣಕ್ಕೆ ಆರೋಪಿ ನನ್ನ ಮಗನ್ನು ಆತನ ಮನೆಗೆ ಕರೆದುಕೊಂಡು ಬಂದಿರುತ್ತಾನೆ. ನನ್ನ ಬಳಿ ಮೊಬೈಲ್ ಫೋನ್ ಇಲ್ಲ. ಚಾಸಾ-2 ರವರ ಬಳಿ ಮೊಬೈಲ್ ಫೋನ್ ಇದೆ.

3. ನನ್ನ ಮಗಳು ಸಾಯುವ ಒಂದು ದಿನ ಪೂರ್ವದಲ್ಲಿ ನನ್ನ ಜೊತೆ ಮಾತನಾಡಿರುತ್ತಾಳೆ. ಘಟನೆಯಾಗುವ ಪೂರ್ವದಲ್ಲಿ ಆರೋಪಿ ಮತ್ತು ನನ್ನ ಮಗಳು ನಮ್ಮ ಊರಿಗೆ ಬಂದಿದ್ದರು, ಆದರೆ ನಮ್ಮ ಮನೆಗೆ ಬಂದಿರುವುದಿಲ್ಲ. ನಾನು ನೀರಿಗೆ ಹೋದಾಗ ನನ್ನ ಮಗಳು ನಮ್ಮ ಊರಿನಲ್ಲಿ ನನಗೆ ಮಾತನಾಡಿಸಿರುತ್ತಾಳೆ. ನಾನು ನೀರಿಗೆ ಹೋಗುವ ಜಾಗ ನನ್ನ ಮನೆಯಿಂದ ಸುಮಾರು ಅರ್ಧ ಕಿ.ಮೀ. ದೂರ ಆಗುತ್ತದೆ. ಆಕೆ ಮ ದುವೆಯಾದಾಗಿನಿಂದ ನಾವು ಆಕೆಯನ್ನು ನಮ್ಮ ಮನೆಗೆ ಸೇರಿಸಿಲ್ಲ, ನಾವು ಆಕೆಯ ಜೊತೆ ಹೊರಗಡೆಯೇ ಮಾತನಾಡುತ್ತಿದ್ದೆವು ಎಂದರೆ ಸರಿಯಲ್ಲ. ಘಟನೆಯಾಗುವ ಒಂದು ವಾರದ ಹಿಂದೆ ನನ್ನ ಮಗಳು ಇಳಕಲ್ ನಲ್ಲಿ ಸೈಟ್ ಖರೀದಿ ಮಾಡಿರುವ ಬಗ್ಗೆ ತಿಳಿಸಿರುತ್ತಾಳೆ. ಸದ್ರಿ ಸೈಟ್ ಅವರಿಬ್ಬರ ಹೆಸರಿನಲ್ಲಿ ಖರೀದಿ ಆಗಿದೆ.

4. ಘಟನೆಯಾಗುವ ಒಂದು ತಿಂಗಳ ಪೂರ್ವದಿಂದ ಆರೋಪಿ ಕಾಪುವಿಗೆ ಬಂದು ನನ್ನ ಮಗಳ ಜೊತೆ ವಾಸ ಮಾಡುತ್ತಿದ್ದ. ಅವರಿಬ್ಬರು ಬೇರೆ ಬೇರೆ ಕಡೆ ಕೆಲಸ ಮಾಡುತ್ತಿದ್ದ ಕಾರಣ ಒಟ್ಟಿಗೆ ವಾಸ ಮಾಡಿದ್ದು ಕಡಿಮೆ ಇರುತ್ತದೆ. ಆರೋಪಿ ನನ್ನ ಮಗಳ ಬಗ್ಗೆ ಅನುಮಾನ ಇದೆ ಎಂದು ನಮ್ಮ ಬಳಿ ಹೇಳಿದ್ದಾನೆ ಎಂದು ಬೇರೆಯವರು ಬಂದು ನನಗೆ ಹೇಳಿರುವುದಿಲ್ಲ. ಆರೋಪಿ ಸಹಾ ನನಗೆ ನನ್ನ ಮಗಳ ಬಗ್ಗೆ ಏನೂ ಹೇಳಿರುವುದಿಲ್ಲ. ನನ್ನ ಮಗಳು ನನಗೆ ಕರೆ ಮಾಡಿದಾಗ ಚಾಸಾ10 ರವರ ಜೊತೆ ಪೋನಿನಲ್ಲಿ ಮಾತನಾಡುತ್ತಿದ್ದೇನೆ ಮತ್ತು ಅದರ ಬಗ್ಗೆ ಆರೋಪಿ ತಪ್ಪು ತಿಳಿದುಕೊಂಡಿದ್ದಾನೆ ಎಂದು ನನಗೆ ಹೇಳಿಲ್ಲ. ಆ ದಿನ ನಾವು ಕಾಪುವಿಗೆ ಬಂದಾಗ ಆರೋಪಿ ಪೋಲಿಸ್ ಠಾಣೆಯಲ್ಲಿ ಇದ್ದ. ಆ ದಿನ ನಾವು ಆರೋಪಿಗೆ ಬೈದಿರುತ್ತೇವೆ. ಅದಕ್ಕೆ ಆತ ಏನೂ ಹೇಳಿರುವುದಿಲ್ಲ. ಆ ದಿನ ಆತ ನಮ್ಮ ಜೊತೆ ಮಾತನಾಡಿರುವುದಿಲ್ಲ.

5. ನಾನು ಅನಕ್ಷರಸ್ಥೆ ಇರುವ ಕಾರಣ ನನಗೆ ಅಕ್ಷರಗಳನ್ನು ನೋಡಿ ಗುರುತಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರಿಗೆ ನಾನು ನನ್ನ ಮಗಳ ಬರವಣಿಗೆಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿದ್ದೇನೆ. ಆ ರೀತಿ ನಾನು ಹೇಳಿಕ್ಕೆ ಕೊಟ್ಟಿಲ್ಲ ಎಂದರೆ

ಸರಿಯಲ್ಲ. ನನ್ನ ಮಗಳ ಆತ್ಮಹತ್ಯೆಗೂ ಮತ್ತು ಆರೋಪಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮದುವೆಯ ನಂತರ ನಾವು ಮಗಳನ್ನು ಪೂರ್ಣ ನಿರ್ಲಕ್ಷಿದೆವು ಮತ್ತು ಆರೋಪಿ ಆಕೆಯನ್ನು ಓದಿಸಿ ಪೋಲಿಸ್ ಕೆಲಸ ಸಿಗುವಂತೆ ಮಾಡಿದ್ದಾನೆ ಎಂದರೆ ಸರಿಯಲ್ಲ. ಅವರಿಬ್ಬರೂ ಒಳ್ಳೆಯ ರೀತಿಯಲ್ಲಿ ಇದ್ದ ಕಾರಣ ಜಂಟಿಯಾಗಿ ನಿವೇಶನವನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾವು ಕಾಪುವಿಗೆ ಬಾರದೇ ಇರುವ ಕಾರಣ ಅವರಿಬ್ಬರ ಸಂಸಾರದಲ್ಲಿ ಏನು ನಡೆಯುತ್ತಿತ್ತು ಎಂದು ನಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲು-1 ಮತ್ತು 2 ನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಮಗಳಿಗೆ ನಿನಗೆ ಬೇರೆ ಹುಡುಗನೊಂದಿಗೆ ಸಂಬಂಧ ಇದೆ ಮತ್ತು ಕೆಲಸಕ್ಕೆ ಬೇಗ ಹೋಗುವುದು, ತಡವಾಗಿ ಬರುವುದು ಮಾಡುತ್ತೀಯಾ ಎಂದು ಅನುಮಾನವಾಗಿ ಆಕೆಯೊಂದಿಗೆ ವರ್ತಿಸುತ್ತಿದ್ದ ಎಂದು ನನ್ನ ಮಗಳು ನನ್ನ ಬಳಿ ಹೇಳುತ್ತಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಆರೋಪಿಗೆ ಬುದ್ದಿ ಹೇಳಿದರೂ ಆತ ನಮ್ಮ ಮಾತು ಕೇಳಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಸದ್ರಿ ವಿಚಾರವನ್ನು ಆತನ ಸ್ನೇಹಿತರ ಜೊತೆಗೂ ಕೂಡ ಹೇಳಿ ಆಕೆಯನ್ನು ಅವಮಾನಿಸುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u>: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

2 ನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.